**ಮಾನವನೇ ಜೀವಂತ ದೇವರು:** ಮೇಲೆ ಉಲ್ಲೇಖಿಸಿದ ಕಥೆಗಳ ಅಂತರಾರ್ಥವಿದು: ನಾವು ಪೂಜಿಸುವ ಧಾರ್ಮಿಕ ಚಿಹ್ನೆಗಳಿಗಿಂತ ಉತ್ತಮವಾದ ಚಿಹ್ನೆ ಇನ್ನಾವುದೋ ಇರುತ್ತದೆ. ಉದಾಹರಣೆಗೆ, ದೇವರನ್ನು ಪೂಜಿಸುವುದಕ್ಕೆ ವಿಗ್ರಹಕ್ಕಿಂತ ಉತ್ತಮವಾದುದು ಜೀವಂತ ಮಾನವ. ಆತನಲ್ಲಿ ಭಗವಂತನ ಪ್ರಕಟಣೆಯು ಹೆಚ್ಚು ಉಜ್ವಲವಾಗಿದೆ. ಹಾಗೆಂದೇ ಸ್ವಾಮೀಜಿ ಹೇಳುತ್ತಾರೆ, "ಉಸಿರಾಡುವ ಸಚೇತನವಾದ ಮಾನವ ದೇಹವೇ (ಭಗವಂತನ) ಸರ್ವೋತ್ಕೃಷ್ಟವಾದ ವೇದಿಕೆ. ಈ ವೇದಿಕೆಗೆ ಪೂಜೆ ಸಲ್ಲಿಸುವುದೇ ನಿರ್ಜೀವವಾದ ಚಿಹ್ನೆಗಳನ್ನು ಪೂಜಿಸುವುದಕ್ಕಿಂತ ಅನಂತ ಪಾಲು ಉತ್ತಮ... ಮಾನವ ದೇಹದಲ್ಲಿರುವ ಜೀವಾತ್ಮವೊಂದೇ ನಾವು ಪೂಜಿಸಬೇಕಾದ ವಸ್ತು." ಅವರ ಪ್ರಕಾರ, ಕಟ್ಟಡಗಳಲ್ಲಿ ತಾಜಮಹಲ್ ಇದ್ದ ಹಾಗೆ, ಜೀವಿಗಳಲ್ಲಿ ಮಾನವದೇಹವೇ ಅತ್ಯಂತ ಶ್ರೇಷ್ಠವಾದುದು. ಅದರಲ್ಲಿ ಭಗವಂತನನ್ನು ಪೂಜಿಸಲು ನಮಗೆ ಸಾಧ್ಯವಾಗದಿದ್ದರೆ, ಉಳಿದ ಯಾವುದೇ ದೇವಸ್ಥಾನಗಳಿಂದಲೂ ಪ್ರಯೋಜನವಿಲ್ಲ. ವೇದಾಂತದ ಸಂದೇಶವೇ ಇದು ಎಂದು ಸ್ವಾಮೀಜಿ ಹೇಳುತ್ತಾರೆ: "ವೇದಾಂತದ ಆದರ್ಶವೇ ಮಾನವನ ನೈಜಸ್ಥಿತಿಯನ್ನು ಅರಿಯುವುದು. ನಿಮ್ಮ ಕಣ್ಣೆದುರಿಗೇ ಇರುವ ದೇವರಾದ ಸಹೋದರ ಮಾನವನನ್ನೇ ಪೂಜಿಸಲು ಆಗದೇ ಇದ್ದರೆ, ಅವ್ಯಕ್ತನಾದ ದೇವರನ್ನು ನೀನು ಹೇಗೆ ಪೂಜಿಸಬಲ್ಲೆ?... ದೇವರ ಅತ್ಯುತ್ತಮ ದೇಗುಲ ನೀವು. ಬೇರಾವ ಗುಡಿಯನ್ನೋ, ವಿಗ್ರಹವನ್ನೋ, ಗ್ರಂಥವನ್ನೋ ಪೂಜಿಸುವ ಬದಲು, ನಿಮ್ಮನ್ನು ನಾನು ಪೂಜಿಸುತ್ತೇನೆ."

**ನಿರ್ಗುಣ ಭಾವನೆಯ ಶ್ರೇಷ್ಠತೆ:** ಸ್ವಾಮೀಜಿಯವರ ಪ್ರಕಾರ, ನಿರ್ಗುಣ ಸ್ವರೂಪದ ದೇವರೇ ಸಚೇತನವಾದ ದೇವರು. ಅದು ಒಂದು ವ್ಯಕ್ತಿಯಲ್ಲ, ತತ್ತ್ವ. ಸಗುಣ ದೇವರು ಒಂದು ವ್ಯಕ್ತಿತ್ವದಲ್ಲಿ ಸೀಮಿತ. ಆದರೆ ನಿರ್ಗುಣ ತತ್ತ್ವವು ದೇವತೆಗಳು, ಮನುಷ್ಯರು, ಪ್ರಾಣಿಗಳು – ಎಲ್ಲದರಲ್ಲೂ ಪ್ರಕಟವಾಗಿರುವ ಪರಿಪೂರ್ಣ ಚೈತನ್ಯ. ಹೀಗಾಗಿ ಅವೆಲ್ಲವೂ ನಮ್ಮ ಆರಾಧ್ಯವಸ್ತುವೇ. ಸ್ವಾಮೀಜಿ ಹೀಗೆ ಹೇಳುತ್ತಾರೆ: "ನಾವು ಒಬ್ಬ ಜೀವಂತ ದೇವರನ್ನು ನೋಡಬೇಕು. ನನ್ನ ಜೀವನದಲ್ಲೆಲ್ಲಾ ನಾನು ದೇವರಲ್ಲದೆ ಬೇರೆ ಯಾವುದನ್ನೂ ನೋಡಿಲ್ಲ. ನೀವೂ ಕೂಡ ಅದರಂತೆಯೇ..." ಈ ಸಂದರ್ಭದಲ್ಲಿ ಶ್ವೇತಾಶ್ವತರ ಉಪನಿಷತ್ತಿನ ಒಂದು ಮಂತ್ರವನ್ನು ಅವರು ಉದಾಹರಿಸುತ್ತಾರೆ: "ಪುರುಷನೂ ನೀನೇ, ಸ್ತ್ರೀಯೂ ನೀನೇ, ಕುಮಾರಿಯೂ ನೀನೇ, ಕುಮಾರನೂ ನೀನೇ. ಕೋಲೂರಿಕೊಂಡು ನಡುಗುತ್ತ ನಡೆಯುವ ಮುದುಕನೂ ನೀನೇ. ನವಶಕ್ತಿ ಉತ್ಸಾಹದಿಂದ ಧೈರ್ಯವಾಗಿ ಚಲಿಸುವ ಯುವಕನೂ ನೀನೇ." ಉಳಿದ ಮತಗಳು ತಮ್ಮ ದೇವರಲ್ಲದೆ, ಬೇರೆ ಯಾವ ದೇವರೂ ಇಲ್ಲ ಎನ್ನುತ್ತವೆ. ಆದರೆ ವೇದಾಂತವು ದೇವರಲ್ಲದ ವಸ್ತುವು ಯಾವುದೂ ಇಲ್ಲ ಎನ್ನುತ್ತದೆ. ಇಂತಹ ಭಾವನೆಯಿಂದ ನಮ್ಮ ಒಟ್ಟಾರೆ ದೃಷ್ಟಿಕೋನವೇ ಬದಲಾಗುವುದು. ಆಗ ಜಗತ್ತು ಒಂದು ನಿತ್ಯ ಸೆರೆಮನೆಯಾಗದೆ ಕ್ರೀಡಾಸ್ಥಾನವಾಗುವುದು. ಆಗ ಎಲ್ಲವೂ ವಂದನೀಯವಾಗುವುದು, ಪೂಜನೀಯವಾಗುವುದು.

**ಅದ್ವೈತ ಕರ್ಮ:** ಇಂತಹ ಉನ್ನತ ಅದ್ವೈತ ಭಾವನೆಯು ಮಹಾನ್ ಕರ್ಮಶೀಲರನ್ನು ಸೃಷ್ಟಿ ಮಾಡುತ್ತದೆ. ಸ್ವಾಮೀಜಿ ಹೀಗೆ ಹೇಳುತ್ತಾರೆ: "ಜಗತ್ತಿನ ಮಹಾನ್ ಕರ್ಮಪಟುಗಳು ಮತ್ತು ಮಹಾನ್ ನೀತಿಶಾಲಿಗಳು ಸಗುಣ ಬ್ರಹ್ಮದ ಉಪಾಸಕರೋ ಅಥವಾ ನಿರ್ಗುಣ ಬ್ರಹ್ಮದ ಉಪಾಸಕರೋ? ನಿಜವಾಗಿಯೂ ನಿರ್ಗುಣ ಸ್ವರೂಪದ ಉಪಾಸಕರು." ನಿಜವಾದ ಪ್ರೇಮ ಉದ್ಭವಿಸುವುದು ಒಬ್ಬನು ಎಲ್ಲವನ್ನೂ ಆತ್ಮಮಯವನ್ನಾಗಿ ನೋಡಿದಾಗಲೇ. ಅಲ್ಲಿ ಬಂಧನವಾಗಲಿ, ಅಂಜಿಕೆಯಾಗಲಿ ಇರುವುದಿಲ್ಲ. ಪ್ರೇಮಕ್ಕೆ ಮೂಲವೇ ಸ್ವಾತಂತ್ರ್ಯ. ಇಂತಹ ದೃಷ್ಟಿಯಿಂದ ಪ್ರಪಂಚವನ್ನು ಪ್ರೀತಿಸಲು ಸಾಧ್ಯವಾದರೆ ಮಾತ್ರ, ನಿಜವಾದ ಸೋದರತ್ವ, ಮಾನವತೆ ಎಂದರೇನು ಎಂದು ಗೊತ್ತಾಗುತ್ತದೆ, ಅದಕ್ಕೆ ಮುಂಚೆ ಅಲ್ಲ.

ಬುದ್ಧದೇವನು ಈ ಬಗೆಯ ಅನಂತವಾದ ಪ್ರೇಮದಿಂದ ಕೂಡಿದ್ದನು. ಈ ಬಗೆಯ ಪ್ರೇಮದ ಹಿನ್ನೆಲೆಯಲ್ಲಿ ಅದ್ಭುತ ತ್ಯಾಗಭಾವನೆ ಇರುವುದು, ವೇದಾಂತವು ಘೋಷಿಸುವ ಸ್ವಾತಂತ್ರ್ಯದ ಪರಿಕಲ್ಪನೆ ಇರುವುದು. ಸ್ವತಂತ್ರವಾಗಿ, ಯಾರಿಂದಲೂ ಏನನ್ನೂ ಅಪೇಕ್ಷಿಸದೆ ಪ್ರೇಮಪೂರಿತರಾಗಿ ಕರ್ಮ ಮಾಡುವುದನ್ನೇ ವೇದಾಂತ ಬೋಧಿಸುತ್ತದೆ. ನಿರ್ಗುಣ ದೇವರ ಕಲ್ಪನೆಯೊಂದೇ ಇದಕ್ಕೆ ಅವಶ್ಯವಾದ ತಾತ್ತ್ವಿಕ ಆಧಾರವನ್ನು ನೀಡಬಲ್ಲುದು. ನಾವೇ ಎಲ್ಲವೂ ಆಗಿರುವಾಗ, ಏಕೆ ತಾನೇ ಇನ್ನೊಂದಕ್ಕಾಗಿ ಆಸೆ ಪಡಬೇಕು? ನಾವೇ ದೇವರೆಂದು ತಿಳಿದಾಗ, ಏಕೆ ತಾನೇ ನೂರಾರು ದೇವರುಗಳ ಮುಂದೆ ಸಹಾಯಕ್ಕಾಗಿ ಅಳಬೇಕು? ನಾವೇ ಎಂದೆಂದಿಗೂ ಪವಿತ್ರಾತ್ಮರಾಗಿರುವಾಗ, ಕಳಂಕವನ್ನು ಹೇಗೆ ತಾನೇ ನಾವು ನೋಡಲು ಸಾಧ್ಯ ? – ಈ ಭಾವನೆ ಇದ್ದಾಗ ನಮ್ಮಲ್ಲಿನ ದೌರ್ಬಲ್ಯ, ದಾಸ್ಯತ್ವ, ಪಾಪಭಾವನೆ – ಎಲ್ಲವೂ ನಾಶವಾಗುತ್ತವೆ. ಆಗ ನಾವು ಯಾರಿಂದಲೂ ಸಹಾಯ ಯಾಚಿಸುವುದಿಲ್ಲ. ಸ್ವತಂತ್ರವಾಗಿ, ನಿರ್ಭೀತಿಯಿಂದ ಕರ್ಮ ಮಾಡುತ್ತೇವೆ. ಅದೇ ನೈತಿಕತೆಗೆ ನಾಂದಿಯಾಗುವುದು. ಸ್ವಾಮೀಜಿಯವರ ಪ್ರಕಾರ, ಇದನ್ನು ಅನುಷ್ಠಾನಕ್ಕೆ ತರುವುದೇ ನಮ್ಮ ಜೀವನದ ಗುರಿಯಾಗಬೇಕು. ಇದರಿಂದ ನಾವು ಯಾವ ಅತೃಪ್ತಿ, ಅಶಾಂತಿಗಳಿಲ್ಲದೆ, ಶಾಂತಿಯಿಂದ, ತೃಪ್ತಿಯಿಂದ ಕೆಲಸ ಮಾಡುತ್ತೇವೆ. ಇದೇ ವೇದಾಂತವು ನಮಗೆ ಕೆಲಸ ಮಾಡಲು ತೋರಿಸುವ ದಾರಿ.

(ಮುಂದುವರಿಯುವುದು)

## ಓದುಗರ ವೇದಿಕೆ

ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಸಂದರ್ಭದಲ್ಲಿ 'ವಿವೇಕಪ್ರಭ'ವು ವಿಶೇಷ ಸಂಚಿಕೆಯೊಂದನ್ನು ಹೊರತರಲಿದೆ. ಇದಕ್ಕಾಗಿ ಓದುಗರಿಂದ ಈ ಕೆಳಗಿನ ವಿಷಯದ ಮೇಲೆ ಸಂಕ್ಷಿಪ್ತ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ.

ವಿಷಯ: **ಸ್ವಾಮಿ ವಿವೇಕಾನಂದರಿಂದ ನಾನು ಪಡೆದ ಸ್ಫೂರ್ತಿ ಮತ್ತು ಅವರು ನನ್ನ ಮೇಲೆ ಬೀರಿದ ಪ್ರಭಾವ**

ನಿಮ್ಮ ಬರಹಗಳು ಫುಲ್‌ಸ್ಕೇಪ್ ಒಂದು ಪುಟದ ಮೇಲೆ ಇರಬಾರದು. ಸಾಧ್ಯವಾದಷ್ಟೂ ಸ್ವಂತ ಅನುಭವದ ವಿವರಣೆ ಇರುವ ಬರಹಗಳಿಗೆ ಮಾತ್ರ ಆದ್ಯತೆ ನೀಡಲಾಗುವುದು. ನಿಮ್ಮ ಬರಹಗಳನ್ನು ಕಳಿಸಲು ಕಡೆಯ ದಿನಾಂಕ : ೩೦.೮.೨೦೧೨.

'ಓದುಗರ ವೇದಿಕೆ' ವಿವೇಕಪ್ರಭ ವಿಭಾಗ, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು – ೫೭೦ ೦೨೦

# ನಿಜಗುಣ ಶಿವಯೋಗಿಗಳ ಸಾಹಿತ್ಯ– ಒಂದು ಪಕ್ಷಿನೋಟ

ಕುಮಾರಿ ನಯನಾ



**ಕನ್ನಡದ ಧಾರ್ಮಿಕ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನಿಜಗುಣ ಶಿವಯೋಗಿಗಳ ಪಾತ್ರ ಹಿರಿದಾದುದು. ಬಹುಮುಖ ಪ್ರತಿಭೆ ಮತ್ತು ಅಪಾರ ಆಧ್ಯಾತ್ಮಿಕ ಅಂತರ್ದೃಷ್ಟಿಯುಳ್ಳ ಇವರ ಕೃತಿಗಳ ಕಿರು ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾರೆ.**

ನಿಜಗುಣ ಶಿವಯೋಗಿಗಳು ಕನ್ನಡ ನಾಡಿನ ಜ್ಞಾನಿಗಳಲ್ಲಿ ಶ್ರೇಷ್ಠರೂ, ಕವಿಗಳಲ್ಲಿ ಗಣ್ಯರೂ ಆದ ಯೋಗಿಯಾಗಿದ್ದಾರೆ. ಅವರ ಕಾಲದ ಬಗ್ಗೆ ವಿದ್ವಾಂಸರಲ್ಲಿ ಹಲವಾರು ಅಭಿಪ್ರಾಯಗಳಿದ್ದು, ಅದನ್ನು ಬಹುತೇಕ ಕ್ರಿ.ಶ.೧೬೦೦ ರ ಆಚೀಚೆ ಎಂದು ಹೇಳಬಹುದು. ಅವರು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಚಿಲಕವಾಡಿ ಗ್ರಾಮದ ಬಳಿ ಇರುವ ಶಂಭುಲಿಂಗನ ಬೆಟ್ಟವನ್ನು ತಮ್ಮ ಸಾಧನೆಯ ಕ್ಷೇತ್ರವಾಗಿ ಮಾಡಿಕೊಂಡು ಅಲ್ಲಿಯೇ ತಮ್ಮೆಲ್ಲ ಕೃತಿಗಳನ್ನೂ ರಚನೆ ಮಾಡಿರುವರು. ಆ ಕ್ಷೇತ್ರದ ಅಧಿಪತಿಯಾದ ಶಂಭುಲಿಂಗನೇ ಅವರ ಆರಾಧ್ಯದೈವ. ಹೀಗಾಗಿ ಆ ದೈವದ ಹೆಸರನ್ನೇ ಅಂಕಿತವನ್ನಾಗಿ ಮಾಡಿಕೊಂಡು ಸಾಹಿತ್ಯ ರಚಿಸಿದ್ದಾರೆ. ನಿಜಗುಣರು ಯೋಗಿಯ ಜೀವನ ನಡೆಸಿದವರು. ಇವರ ಒಲವು ಪ್ರವೃತ್ತಿಯಿಂದ ನಿವೃತ್ತಿಯ ಕಡೆಗೆ, ಸಂಸಾರದಿಂದ ವೈರಾಗ್ಯದ ಕಡೆಗೆ. ಚೆನ್ನಸದಾಶಿವಯೋಗಿ ಎಂಬ ಮಹಾತ್ಮರು ಇವರ ಗುರುಗಳಾಗಿದ್ದರು.

ನಿಜಗುಣರು ಉಭಯ ಭಾಷಾ ಕವಿಗಳು, ಪರಿಣತರು. ಪುರಾತನ ತ್ರಿವಿಧಿ (ತ್ರಿಪದಿ), ಕೈವಲ್ಯಪದ್ಧತಿ (ಹಾಡು ಸ್ವರವಚನ) ಪರಮಾನುಭವ ಬೋಧೆ, ಪರಮಾರ್ಥಗೀತೆ (ಲಲಿತ ರಗಳೆ), ಅನುಭವಸಾರ (ತ್ರಿಪದಿ), ಪರಮಾರ್ಥ ಪ್ರಕಾಶಿಕೆ (ಗದ್ಯ ವ್ಯಾಖ್ಯಾನ), ವಿವೇಕ ಚಿಂತಾಮಣಿ (ಗದ್ಯ ವಿಶ್ವಕೋಶ), 'ಸ್ವರೂಪಸಿದ್ಧಿ' ಟೀಕೆ (ಪರಮಜ್ಯೋತಿ ಕವಿಯ 'ಅನುಭವ ಮುಕುರ'ದ ತೃತೀಯ ಪ್ರಕರಣದ ಟೀಕು) ಎಂಬ ಎಂಟು ಕೃತಿಗಳನ್ನು ರಚಿಸಿರುವರು. ಈ ಕೃತಿಗಳು ಜನಪ್ರಿಯವಾಗಿದ್ದರಿಂದ ಅವುಗಳ ಹಸ್ತಪ್ರತಿಗಳು ನಾಡಿನಾದ್ಯಂತ ದೊರೆತಿವೆ.

**೧) ಪುರಾತನರ ತ್ರಿವಿಧಿ:** ಈ ಕೃತಿಯನ್ನು ತಮಿಳುನಾಡಿನಲ್ಲಿ ಶೈವಧರ್ಮದ ಪುನರುತ್ಥಾನಕ್ಕೆ ಶ್ರಮಿಸಿದ ಶಿವಭಕ್ತರಲ್ಲಿ ಪ್ರಸಿದ್ಧರಾದ ೬೩ ಮಂದಿ ಪುರಾತನರನ್ನು ಕುರಿತಂತೆ ರಚಿಸಲಾಗಿದೆ. ಒಬ್ಬೊಬ್ಬರೂ ಶಿವನಿಗೆ ತಮ್ಮ ತನಿಯಾದ ನಿಷ್ಠೆಯನ್ನು ವ್ಯಕ್ತಪಡಿಸಿದವರಲ್ಲಿ ಮುಂದಾದವರು. ಶಿವನು ಅವರನ್ನು ಪರೀಕ್ಷಿಸಹೊರಟಾಗ, ಆ ಭಕ್ತಿಪರೀಕ್ಷೆ ಅತ್ಯಂತ ಕಠಿಣವಾದರೂ, ಅವರೆಲ್ಲರೂ ಅದರಲ್ಲಿ ಜಯಶೀಲರಾದವರು. ಈ ಭಕ್ತಿಪರೀಕ್ಷೆ ಮಾನವಾತೀತವಾದುದು, ಅಸಾಮಾನ್ಯವಾದದ್ದು. ಸಾಮಾನ್ಯರಿಗೆ ಸಾಧ್ಯವಾಗದು. ಕ್ರಿ.ಶ. ೫ನೇ ಶತಮಾನದಿಂದ ೮ನೇ ಶತಮಾನದವರೆಗೆ ಬಾಳಿದ ಈ ಭಕ್ತರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರರುಗಳಿದ್ದರು. ಇವರು ವೈವಿಧ್ಯಮಯವಾದ ಕಾಯಕಗಳಲ್ಲಿ ನಿರತರಾಗಿದ್ದರೂ, ಶ್ರೀಮಂತರು ಮತ್ತು ಬಡವರಿದ್ದರೂ, ಇವರೆಲ್ಲರನ್ನೂ ಒಂದುಗೂಡಿಸಿರುವುದು ಶಿವಭಕ್ತಿಯೇ. ಬೇರೆ ಬೇರೆ ಕಾಲಮಾನಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಇದ್ದವರಾದರೂ, ಶಿವಭಕ್ತಿಯು ತಮಿಳುನಾಡಿನ ಎಲ್ಲೆಡೆ ಹರಡಲು ಈ ಪುರಾತನರು ಕಾರಣರಾದರು. ಇವರ ಬದುಕು ಆದರ್ಶವಾದುದರಿಂದ ಅದು ಮುಂದಿನವರಿಗೆ ಸ್ಫೂರ್ತಿ ನೀಡಿತು.

**೨) ಕೈವಲ್ಯ ಪದ್ಧತಿ :** 'ಕೈವಲ್ಯ' ಎಂಬ ಪದವನ್ನು ಮೊದಲಿಗೆ ಬಳಸಿದವರು, ನಿಜಗುಣ ಶಿವಯೋಗಿಗಳು. 'ಲಿಂಗಾಂಗ ಸಾಮರಸ್ಯದಿಂದ ಬರುವ ಆತ್ಯಂತಿಕ ಆನಂದ' ಎಂದು ವೀರಶೈವ ಪರಿಭಾಷೆಯಲ್ಲಿ ಇದನ್ನು ವಿವರಿಸಲಾಗಿದೆ. ವಿಶಾಲವಾದ ಅರ್ಥದಲ್ಲಿ ಇದು ಆತ್ಮಾನುಭವವೇ ಆಗಿದೆ. ಕೈವಲ್ಯ ಪದ್ಧತಿಯು ವಿವಿಧ ರಾಗಗಳಲ್ಲಿ ರಚನೆಗೊಂಡ, 'ಶಂಭುಲಿಂಗ' ಎಂಬ ಅಂಕಿತವಿರುವ ಗೀತೆಗಳ ಸಂಕಲನವಾಗಿದ್ದು, ಶಿವಕಾರುಣ್ಯಸ್ಥಲ, ಜೀವಸಂಬೋಧನಾಸ್ಥಲ, ನೀತಿಕ್ರಿಯಾಚರ್ಯಸ್ಥಲ, ಯೋಗ ಪ್ರತಿಪಾದನಾಸ್ಥಲ, ಜ್ಞಾನಪ್ರತಿಪಾದನಾಸ್ಥಲ ಎಂಬ ಐದು ಸ್ಥಲಗಳಲ್ಲಿ ವಿಂಗಡಣೆಗೊಂಡಿದೆ. ಇಲ್ಲಿಯ ಸ್ಥಲಕಲ್ಪನೆ ಸಾಧಕನ ಅನುಭವದ ವಿವಿಧ ಹಂತಗಳನ್ನು ಧ್ವನಿಪೂರ್ಣವಾಗಿ ಸಂಕೇತಿಸುತ್ತದೆ. ಈ ಅರ್ಥದಲ್ಲಿ ನಿಜಗುಣರ ಈ ಸ್ಥಲಕಲ್ಪನೆ ಬಹಳ ವಿಶಿಷ್ಟವಾದದು ಎಂದು ಹೇಳಬಹುದು. **"ಆಬಾಲಯವ್ವನ ವೃದ್ಧರಿಗೆ ಆಯಾಸವಿನಿತಿಲ್ಲದಂತೆ, ಸಕಲ ವೇದಾಂತಾಗಮ ಸ್ಮೃತಿ ಪುರಾಣೇತಿಹಾಸ ಸೂತ್ರಾದಿ ಶಾಸ್ತ್ರಸಮ್ಮತದಿಂ, ಪುರಾತನ ಗೀತಾನುಗುಣ್ಯವೆನಿಸಿ ಮೃದು ಮಧುರ ಲಕ್ಷಣಯುಕ್ತಮಾಗಿ"** ಈ ಹಾಡುಗಳು ರಚಿತವಾಗಿದೆಯೆಂದು ನಿಜಗುಣರೇ ಹೇಳಿ